ಹೇಳಿಕೊಳ್ಳುವುದಕ್ಕೆ ಸಣ್ಣ ಉಳುಕು. ಆದರೆ ಅನುಭವಿಸಲು... ಅವರಿಗೆ ನರಸಿಂಹಸ್ವಾಮಿಯವರ ಕವಿತೆಯೊಂದು ನೆನಪಾಯಿತು 'ಬಾಂದಳದ ವಿಮಾನ/ಅದೆಷ್ಟು ನಿಧಾನ/ ದಾರವಿಲ್ಲದ ಸೂಜಿ ನಾಟಿದೆ ನೀಲಿಬಟ್ಟೆಯಲ್ಲಿ...' ತರಗತಿಯಲ್ಲಿ ಹೇಳಿದ ಸಹಜ ವಾಚ್ಯಾರ್ಥವನ್ನ ಮೀರಿದ ವಿಶೇಷ ಅರ್ಥ ಅದರಲ್ಲಿರುವಂತೆ ಈಗ ಭಾಸವಾಗತೊಡಗಿತು. ನೀಲಿ ವಿಷದ ಸಂಕೇತ. ಬಟ್ಟೆ ಅಂದರೆ ವಸ್ತ್ರ ಮತ್ತು ದಾರಿ. ವಿಷದ ಬದುಕಿನಲ್ಲಿ ಸೂಜಿ ನಾಟುತ್ತದೆ. ಗಾಯದ ಮೇಲೆ ಬರೆ. ಮತ್ತೆ ಬಾಂದಳದ ವಿಮಾನ? ಕರ್ಮಫಲವೆ? ಈ ಉಪಾಧಿಯನ್ನ ನಾವೇ ಹಚ್ಚಿಕೊಂಡದ್ದೆ? ಸಾಗದೆನ್ನಿಸಿಯೂ ಸಾಗುತ್ತಲೇ ಇರುವ ವಿಮಾನ... ಛೆ, ಅದು ಬರೇ ರೂಪಕ. ಯಾಕೋ ಸರಿ ಹೋಗುತ್ತಿಲ್ಲ, ಇಲ್ಲದ ಅರ್ಥವನ್ನ ಹಚ್ಚುತ್ತಿದ್ದೇನೇನೊ. ಆ ಇಡೀ ಕವಿತೆಯನ್ನೇ ಮತ್ತೆ ಓದಬೇಕು ಅಂದುಕೊಳ್ಳುತ್ತಿದ್ದಂತೆ ರುಕ್ಮಿಣಿ ಮೂರನೆಯ ಬಾರಿ ಹೇಳಿದಳು:

'ಏಳಿ, ಸ್ನಾನಕ್ಕೆ ಬಿಟ್ಟು ಬರುತ್ತೇನೆ.'

'ಆಂ, ಸ್ನಾನಕ್ಕಾ. ಹುಂ. ಕೇಳಿಸಲೇ ಇಲ್ಲ ನೋಡು. ನಮ್ಮ ದಿಕ್ಕೆಟ್ಟ ಸಂಸಾರದ ಬಗ್ಗೆ ಯೋಚಿಸುತ್ತಿದ್ದೆ. ನಾನು ಮಾಡಿದ್ದು ಸರಿಯಾ ಎಂದು. ಎಷ್ಟು ಆಯಾಮದಲ್ಲಿ ಯೋಚಿಸಿದರೂ ನಾನೀಗ ಸ್ವಚ್ಛವಿದ್ದೇನೆ ಅಂತಲೇ ಅನ್ನಿಸುತ್ತೆ. ಮತ್ತೆ ಸ್ನಾನ ಬೇಕೇನೆ ನನಗೆ?'

'ಮನಸ್ಸಿ ನೀವು ಪರಿಶುದ್ಧರೇ, ನನಗೆ ಗೊತ್ತು. ಹಿಂದಿನ ಗುರುಗಳು ಹೇಳುತ್ತಿರಲಿಲ್ಲವೆ– ಮನುಷ್ಯತ್ವದಷ್ಟು ಒಳ್ಳೆಯ ಸಂಸ್ಕಾರ ಬೇರೊಂದಿಲ್ಲ ಎಂದು' ಎಂದು ರುಕ್ಮಿಣಿಯೆಂದಾಗ ಅವಳ ಕಣ್ಣಿನ ಆಪ್ತ ಹೊಳಪನ್ನ ಗಮನಿಸಿದರು. ಆ ಕ್ಷಣ ಅವರಿಗೆ ರುಕ್ಮಿಣಿ ಹಿಂದಿನ ಸ್ವಾಮಿಗಳ ಹಾಗೇ ಕಂಡಳು. ರುಕ್ಮಿಣಿ ಮತ್ತೆ ಹೇಳಿದಳು, 'ಆದರು ಬಾಹ್ಯ ಶುದ್ಧಿಯು ಅಷ್ಟೇ ಮುಖ್ಯವಲ್ಲವೆ? ಬನ್ನಿ, ನಾನೇ ನಾಲ್ಕು ತಂಬಿಗೆ ಹೊಯ್ತೇನೆ'.

'ಹುಂ. ನೀನನ್ನುವುದೂ ಸರೀನೆ. ಬಚ್ಚಲಲ್ಲಿ ಮತ್ತೆ ಜಾರಿ ಬೀಳದಿದ್ದರಾಯಿತು' ಎನ್ನುತ್ತ, ಅಂಗಿಯ ಗುಂಡಿ ತೆಗೆಯತೊಡಗಿದರು. ಗಂಡನನ್ನ ಆಧರಿಸಿ ಹಿಡಿದು ನಡೆಯುತ್ತ ರುಕ್ಮಿಣಿ ಹೇಳಿದಳು 'ಮುಂದಿನ ತಿಂಗಳೇ ಗಣೇಶಚೌತಿ. ಮಗಳು ಅಳಿಯಂಗೆ ಫೋನ್ ಮಾಡಿ, ಹಬ್ಬಕ್ಕೆ ಬರಲು. ಇರುವುದನ್ನ ಮನಸ್ವೀ ಅನುಭವಿಸುವುದೇ ಸಂತೋಷದ ಮೂಲ'.

'ಖಂಡಿತವಾಗಿ' ಎಂದ ಭಟ್ಟರಿಗೆ ರುಕ್ಮಿಣಿ ಸ್ಥಿತಪ್ರಜ್ಞ ಕೃಷ್ಣನ ಹಾಗೆ ಕಂಡಳು.

**ಟಿ.ಎಂ. ರಮೇಶ**

ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರಾಗಿದ್ದು, ಹುದ್ದೆಯಿಂದ ಸ್ವಯಂನಿವೃತ್ತರು. ಪ್ರಸಕ್ತ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ನೆಲೆಸಿದ್ದಾರೆ. ಪ್ರಕಟಿತ ಕಥಾಸಂಕಲನಗಳು: 'ಇಂಡಾ', 'ದೃಷ್ಟಿ ಹರಿದಷ್ಟೆ ದೂರ', 'ಕಿಚ್ಚು ಮತ್ತಿತರ ಕತೆಗಳು' ಮತ್ತು 'ಗೋಡೆಕಿಂಡಿ'. ಪ್ರಕಟಿತ ಕಿರುಕಾದಂಬರಿ: 'ಭೂತ' ಮತ್ತು 'ಯುಗ್ಮ'. ಕವನ ಸಂಕಲನ: 'ಹುತ್ತಗಟ್ಟಿದೆ ಕವಿತೆ'. ತಾಳಮದ್ದಲೆ ಅರ್ಥದಾರಿಕೆ ಹವ್ಯಾಸ.